**ದಿಃ-22.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿಸವಾಲು ಃ ಪ್ರತಿವಾದಿ ನಂ.1 ಪರ ಶ್ರೀ. ಸಿ.ಎನ್.ಕೆ ವಕೀಲರಿಂದ ಃ**

13. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ನಿಮ್ಮ ತಂದೆಯುವರು ಆನಂದ ಕೋ ಆಪರೇಟಿವ್ ಬ್ಯಾಂಕಿನಿಂದ ಗೃಹ ಸಾಲವನ್ನು ಪಡೆದಿದ್ದು ಅದನ್ನು ದಿಃ 20.07.2007 ರಂದು ತೀರಿಸಿದ ಬಗ್ಗೆ ನೀಡಿದ ದಿಃ 04.032020 ರಂದು ಪತ್ರ ನೀಡಿದ್ದರು ಎಂದರೆ ಈ ಬಗ್ಗೆ ನನಗೆ ಗೊತ್ತಿಲ್ಲ.

14. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿ ಪ್ರತಿವಾದಿ 1 ರವರು ವಿಶ್ವಾಸ ಕ್ರೆಡಿಟ್ ಕೊ-ಆಪರೇಟಿವ್ . ಸೊಸೈಟಿ ಇಂದ ಗೃಹ ಸಾಲ ಪಡೆದಿದ್ದು ಅದನ್ನು ದಿಃ 28.06.2003 ರ ಒಳಗೆ ತೀರಿಸಬೇಕು ಎಂದು ನೋಟಿಸ್ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ.

15. ಅದು ವಾದಪತ್ರದ ಸ್ವತ್ತು ತಪಸೀಲಿನ 2 ಮತ್ತು 3 ನೇ ಐಟಂ ನಲ್ಲಿ ನಾನು ವ್ಯವಸಾಯ ಮಾಡಿಸಿರುತ್ತೇನೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2005 ರಿಂದ ಈ 2 ಜಮೀನುಗಳಲ್ಲಿ ಬಾಳೆ ತೋಟ ಮತ್ತು ತೆಂಗಿನ ಮರಗಳನ್ನು ಬೆಳೆಸಿಕೊಂಡು ಅವುಗಳನ್ನು ಹಾರೈಕೆ ಮಾಡಿಕೊಂಡು ಬರುತ್ತಿದ್ದೇವೆ. 2005 ನೇ ಇಸವಿಯಲ್ಲಿ ನನ್ನ ವಯಸ್ಸು 18 ರಿಂದ 19 ವರ್ಷ ಆಗಿರಬಹುದು. 2005 ರಲ್ಲಿ ನಾನು ಬೆಂಗಳೂರಿನಲ್ಲಿ ವಿದ್ಯಾರ್ಥಿ ಆಗಿದ್ದೆ. ನಾನು ಆ ಸಮಯದಲ್ಲಿ ಬೆಂಗಳೂರಿನಲ್ಲಿ ವಿದ್ಯಾರ್ಥಿನಿಯಾಗಿದ್ದರಿಂದ

ನನ್ನ ತಂದೆಗೆ ಯಾವಾಗಲು ಮೇಲಿನ ತೋಟಗಳನ್ನು ಬೆಳೆಸುವಲ್ಲಿ ಸಹಾಯ ಮಾಡಿಲ್ಲ ಎಂದರೆ ಸರಿಯಲ್ಲ.

16. ನನ್ನನ್ನು ನನ್ನ ತಂದೆಯವರು ಅಂಬೇಡ್ಕರ್ ಕಾಲೇಜಿನಲ್ಲಿ ಬಿ.ಇ. ವಿದ್ಯಾಭ್ಯಾಸ ಮಾಡಿದಸಿದ್ದರು ಎಂದರೆ ಸಾಕ್ಷಿ ನನ್ನ ತಾಯಿ ಮಾಡಿಸಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ನನಗೆ ಒಂದು ಲಾಪ್ ಟಾಪ್ ತರಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ.

17. ನನ್ನ ತಂದೆಯವರು ನಮ್ಮ ಜಮೀನಿನಲ್ಲಿ ಒಂದು ಕೊಳವೇ ಬಾವಿಯನ್ನು ತೋಡಿಸಿರುತ್ತಾರೆ. ಸಾಕ್ಷಿ ಮುಂದುವರೆದು ಅದಕ್ಕೆ ನಾನು ಹಣ ಸಹಾಯ ಮಾಡಿದ್ದೇನೆ ಎಂದು ನುಡಿದಿರುತ್ತಾರೆ. ಅವರು 1995 ನೇ ಇಸವಿಯಲ್ಲಿ ಅದನ್ನು ಕೊರೆಸಿರುತ್ತಾರೆ. ನಾನು ಆ ಸಮಯದಲ್ಲಿ ಅಪ್ರಾಪ್ತಳಾಗಿದ್ದರಿಂದ ನಾನು ಯಾವುದೇ ಹಣದ ಸಹಾಯವನ್ನು 1995 ರಲ್ಲಿ ಮಾಡಿಲ್ಲ ಎಂದರೆ ಸರಿ. ನಮ್ಮ ಜಮೀನು ಸಮತಟ್ಟಾಗಿ ಇಲ್ಲದಿದುದ್ದರಿಂದ ಅದನ್ನು ಕೃಷಿಗೆ ಯೋಗ್ಯ ಮಾಡುವ ಸಲುವಾಗಿ ಚನ್ನಪಟ್ಟಣದ ಕೃಷಿ ಪ್ರಾಥಮಿ ಸಹಕಾರ ಬ್ಯಾಂಕಿನಲ್ಲಿ 1980 ರಲ್ಲಿ ಸಾಲ ಪಡೆದು ಅದನ್ನು ಅಭಿವೃದ್ಧಿಗೋಳಿಸಿದ್ದರು ಎಂದರೆ ಸರಿಯಲ್ಲ.

18. ವಾದ ಪತ್ರದ ಸ್ವತ್ತಿನ ಐಟಂ 2 ಮತ್ತು 3 ಕ್ಕೆ ಸಂಬಂಧಿಸಿದ ಪಹಣಿಪತ್ರಿಕೆಗಳನ್ನು ನೋಡಿರುತ್ತೇನೆ. ನಿಪಿ.28 ರಿಂದ ನಿಪಿ.48 ರ ವರೆಗಿನ ಆರ್‌ಟಿಸಿಗಳನ್ನು ಐಟಂ ನಂ2 ಮತ್ತು 3 ಕ್ಕೆ ಸಂಬಂಧಪಟ್ಟಂತೆ ಸಲ್ಲಿಸಿದ್ದು ಅದರಲ್ಲಿ ಕೃಷಿ ಸಾಲ ಪಡೆದಿದ್ದು ಆಧಾರ ಮಾಡಲಾಗಿದೆ ಎಂದು ನಮೂದಾಗಿದೆ ಎಂದರೆ ನನಗೆ

ಗೊತ್ತಿಲ್ಲ. ನನ್ನ ತಂದೆಯವರು ವೃಧ್ಯಾಪ್ಯದಿಂದ ಕೃಷಿ ಮಾಡಲು ಆಗದೇ ಇದುದ್ದರಿಂದ ಪ್ರಸ್ತುತ ಆ ಜಮೀನು ಕೃಷಿ ಇಲ್ಲದೇ ಪಾಳು ಬಿದ್ದಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮನ್ನು ಹೋಗಲು ಬಿಡುತ್ತಿಲ್ಲ ಎಂದು ಹೇಳುತ್ತಾರೆ.

19. ಸಾಕ್ಷಿಗೆ ಒಂದು ಪೊಟೋವನ್ನು ತೋರಿಸಿ ಇದು ನಿಮ್ಮ ತೋಟವೇ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದಕ್ಕೆ ಯಾವುದೇ 65 ಬಿ ಪ್ರಮಾಣಪತ್ರ ಮತ್ತು ಸಿಡಿಯನ್ನು ಹಾಜರುಪಡಿಸದೇ ಇದುದ್ದರಿಂದ ಅದನ್ನು ನಿಶಾನೆಯಾಗಿ ಗುರುತಿಸಲಾಗಿರುವುದಿಲ್ಲ. ಈ ಪೋಟೋದಲ್ಲಿ ನನ್ನ ತಂದೆಯವರು ಹಳೆಯ ಬೌರವೇಲ್ ಅನ್ನು ರಿಪೇರಿ ಮಾಡಿ ಅದ್ಕೆ 2 ಲಕ್ಷ ಹಣವನ್ನು ಖರ್ಚು ಮಾಡಿದ್ದಾರೆ ಮತ್ತು ಆ ಇದು ಸಮಯದಲ್ಲಿ ತೆಗೆದು ಪೋಟೋ ಎಂದರೆ ಸಾಕ್ಷಿಯು ಅವರು ಆ ಸಮಯದಲ್ಲಿ ಏನು ಮಾಡಿದ್ದಾರೆ ಎಂದು ಹೇಳಲು ನಾನು ಆ ಸಮಯದಲ್ಲಿ ನಾನು ಅಲ್ಲಿಗೆ ಹೋಗಿಲ್ಲ ಎಂದು ನುಡಿಯುತ್ತಾರೆ.

20. ವಾದಪತ್ರದ ಸ್ವತ್ತಿನ ಐಟಂ ನಂ.2 ಮತ್ತು 3 ರನ್ನು ಅಬಿವೃದ್ಧಿಗೊಳಿಸಲು ಮತ್ತು ಕೊಳವೇ ಬಾವಿಯನ್ನು ಕೊರೆಯಲು ಸುಮಾರು 5 ಲಕ್ಷ ಹಣವನ್ನು ಸಾಲ ಮಾಡಿದಾದರೆ ಹಾಗೂ ಆ ಸಾಲ ತೀರಿಸಲು ನಾವು ಜವಾಬ್ದಾರರು ಎಂದು ನುಡಿಯುತ್ತಾರೆ.

21. ವಾದಪತ್ರದ ಸ್ವತ್ತಿನ ಐಟಂ ನಂ.1 ಸ್ವತ್ತನ್ನು ಬಾಡಿಗೆಗೆ ನೀಡಿಲ್ಲ. ಆದರೆ ಬೋಗ್ಯಕ್ಕೆ ನೀಡಿದ್ದು, ಆ ಹಣವನ್ನು ನಮ್ಮ

ತಂದೆ ಪಡೆದಿರುತ್ತಾರೆ. ಲೀಸಿಗೆ ಹಾಕಿದ ರೂ.5,50,000/- ಹಣವನ್ನು ನನ್ನ ಖಾತೆಗೆ ನನ್ನ ತಂದೆಯ ಖಾತೆಯಿಂದ ವರ್ಗಾವಣೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

22. ದಿಃ 25.05.2018 ರಂದು ನನ್ನ ತಂದೆಯ ಸಹಿಯುಳ್ಳ ಖಾಲಿ ಚೆಕ್ ಅನ್ನು ಅವರ ಅರಿವಿಗೆ ಬಾರದೇ ಪಡೆದು ಅದನ್ನು ವೈಸ್ಸುಳ ಎಂಬ ವ್ಯಕ್ತಿಯ ಖಾತೆಗೆ ವರ್ಗಾವಣೆ ಮಾಡಿದ್ದೇನೆ ಎಂದರೆ ಸರಿಯಲ್ಲ.

23. ನನ್ನ ಅಣ್ಣ 2 ನೇ ಪ್ರತಿವಾದಿಯವರು ಮನೆ ಬಾಡಿಗೆಯನ್ನು ಒತ್ತಾಯಪೂರ್ವಕವಾಗಿ ತಾನೆ ಬಾಡಿಗೆದಾರರಿಂದ ಪಡೆಯುತ್ತಿದ್ದಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

24. ನಾನು ನನ್ನ ತಂದೆಗೆ ತಾತ್ಸಾರ ಮಾಡುತ್ತೇನೆ, ಕೀಳಾಗಿ ನೋಡುತ್ತೇನೆ, ಬೆದರಿಕೆ ಹಾಕುತ್ತೇನೆ, ಜೋರಾಗಿ ಮಾತನಾಡುತ್ತೇನೆ ಮತ್ತು ಅವರು ಯಾವುದೇ ಸಹಾಯವನ್ನು ಮಾಡುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ 2 ಪೇಪರ್ ಪೋಟೋಗಳನ್ನು ತೋರಿಸಿ ಅದರಲ್ಲಿ ಇರುವ ವ್ಯಕ್ತಿ ಎಂದು ಕೇಳಿದಾಗ ಸಾಕ್ಷಿ ಆತನ ಹೆಸರು ವಯ್ಸುಳ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ 5 ಹಾಳೆಗಳುಳ್ಳ 8 ಪುಟಗಳುಳ್ಳ ಪತ್ರವನ್ನು ನನ್ನ ಕೈಯಾರೆ ನನ್ನ ತಂದೆಗೆ ಬರೆದ ಪತ್ರ ಇದು ಎಂದು ಕೇಳಲಾಗಿ ಸಾಕ್ಷಿಯು ಅವುಗಳನ್ನು ಪರಿಶೀಲಿಸಿ ನೋಡಿ ನಾನು ಬರೆದಿಲ್ಲ ಮತ್ತು ಅದು ನನ್ನ ಕೈಬರಹದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಈ ಪತ್ರದಲ್ಲಿ ನಿಮ್ಮ ಕೈಬರಹ ಇಲ್ಲ ಎಂದು ಹೇಳಿದ ಪಕ್ಷದಲ್ಲಿ ಇದನ್ನು ಬರಹ ತಜ್ಞರಿಗೆ ಕಳುಹಿಸಿ ನಿಮ್ಮ

ಮಾದರಿ ಬರಹಗಳನ್ನು ಪಡೆದು ಅದನ್ನು ಕಳಿಸಿ ವಿದಿವಿಜ್ಞಾನ ಇಲಾಖೆಯಿಂದ ವಿಶ್ಲೇಷಣೆಗೆ ಒಳಪಡಿಸಿ ಅಭಿಪ್ರಾಯ ಪಡೆಯುವಲ್ಲಿ ನಿಮಗೆ ತೊಂದರೆ ಇದೆಯೇ ಎಂದು ಕೇಳಲಾಗಿ ಸಾಕ್ಷಿಯು ಅದನ್ನು ವಿದಿವಿಜ್ಞಾನ ಇಲಾಖೆಗೆ ಕಳುಹಿಸಬಹುದು, ನಾನು ಅದನ್ನು ಬರೆದಿಲ್ಲ ಎಂದು ನುಡಿಯುತ್ತಾರೆ.

25. ನನ್ನ ತಂದೆಗೆ ನಾನು ಮತ್ತು ನನ್ನ ಅಣ್ಣ ಸೇರಿ ಪ್ರಾಣಬೆದರಿಕೆ ಹಾಕಿ ಹಿಂಸೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆಯ ಆಹಾರ, ಹಾರೈಕೆ ಮತ್ತು ಆಶ್ರಯಕ್ಕೆ ಸಹಾಯ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2021 ರ ವರೆಗೆ ಅವರ ಖಾತೆಗೆ ಹಣವನ್ನು ಹಾಕಿರುತ್ತೇನೆ ಎಂದರೆ ನುಡಿಯುತ್ತಾರೆ. ಸಾಕ್ಷಿ ಪುನಃ ಮುಂದುವರೆದು 2020 ರ ವರೆಗೆ ಹಾಕಿರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ತಂದೆಯ ಅರೋಗ್ಯಕ್ಕೂ ಯಾವುದೇ ಸಹಾಯ ಮಾಡಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಪುನರ್ ವಸತಿ ಕೇಂದ್ರ ನನ್ನ ತಂದೆ ಸೇರಿಸಿಲ್ಲ ಬದಲಾಗಿ ನನ್ನ ಅಣ್ಣ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಅಪಾರಮಧ್ಯವಸನಿ ಆಗಿದ್ದು ಮತ್ತು ಮಾನಸಿಕ ಖಿನ್ನತೆಗೆ ಒಳಗಾಗಿದ್ದರಿಂದ ಅದರಿಂದ ವರಬರಲು ನನ್ನನ್ನು ರಿಯಾಬಿಲಿಟೇಷನ್ ಸೆಂಟರ್‌ಗೆ ನನ್ನ ಅಣ್ಣ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ.

26. ನಾನು ನನ್ನ ವಾದಪತ್ರದಲ್ಲಿ ಹೇಳಿದಂತೆ ನನ್ನ ಅಣ್ಣ ಗಾಂಜಾವಸನಿ ಮತ್ತು ಮದ್ಯವಸನಿಯಾಗಿದ್ದ ಬಗ್ಗೆ ನಾನು ನೋಡಿರುವುದಿಲ್ಲ. ನಾನು ವಾದ ಪತ್ರವನ್ನು ಮತ್ತು

ಮುಖ್ಯವಿಚಾರಣೆ ಪ್ರಮಾಣಪತ್ರವನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನಾನು ವಾದಪತ್ರದಲ್ಲಿ ಮತ್ತು ಮುಖ್ಯವಿಚಾರಣೆ ಪ್ರಮಾಣಪತ್ರದಲ್ಲಿ ನನ್ನ ಅಣ್ಣ ಮದ್ಯವೆಸನಿ ಮತ್ತು ಗಾಂಜವೆಸನಿ ಎಂದು ಸುಳ್ಳು ಬರೆದಿದ್ದೇನೆ ಎಂದರೆ ನನಗೆ ಗೊತ್ತಿಲ್ಲ.

27. 1990 ರಿಂದ ನನ್ನ ತಾಯಿಯ ಆರೋಗ್ಯ ತುಂಬ ಹದಗೆಟ್ಟಿತ್ತು ಮತ್ತು ಆಹಾರ ಸೇವಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯವರು ಸಾಯುವತನಕ ಮದ್ಯವೆಸನಿಯಾಗಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಮದ್ಯವೆಸನದ ಖರ್ಚಿಗೆ ಮತ್ತು ಆರೋಗ್ಯದ ಖರ್ಚಿಗೆ ಅವರು ದುಡಿದ ವೇತನದ ಹಣ ಸಾಕಾಗದೇ ಇದುದ್ದರಿಂದ ನನ್ನ ತಂದೆಯಿಂದ ಹಣ ಪಡೆದು ಖರ್ಚು ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ನನ್ನ ಅಣ್ಣನನ್ನು ಪುನರ್ ವಸತಿ ಕೇಂದ್ರಕ್ಕೆ ಮಾನಸಿಕ ಮತ್ತು ದೈಹಿಕ ಸುಧಾರಣೆಗೋಸ್ಕರ ನಾನೇ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**